ಶಿಕ್ಷಣದ ಹಕ್ಕು ಕಾಯಿದೆಯ ಶಾಸನ ರಚನೆ

685 (444) ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣದ ಹಕ್ಕು ಕಾಯಿದೆಯ ಶಾಸನ (ನಿಯಮ) ರಚನೆ ಮಾಡುವಲ್ಲಿ ವಿಳಂಭಕ್ಕೆ ಕಾರಣವೇನು; ಇದನ್ನು ಯಾವಾಗ ಮಾಡಲಾಗುವುದು;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಿಕ್ಷಣದ ಹಕ್ಕು ಕಾಯಿದೆಯ ಅನುಷ್ಠಾನಕ್ಕಾಗಿ "ರಾಜ್ಯ ಕರಡು ನೀತಿಯನ್ನು" ಈಗಾಗಲೇ ರೂಪಿಸಲಾಗಿದ್ದು, ಸರ್ಕಾರದಲ್ಲಿ ಅಧಿಸೂಚನೆ ಹೊರಡಿಸುವ ಹಂತದಲ್ಲಿರುತ್ತದೆ.

ಈಗಾಗಲೇ ತಯಾರಾಗಿರುವ ರಾಜ್ಯ ಕರಡು ನೀತಿಯ ಬಗ್ಗೆ ಕಾನೂನು ಇಲಾಖೆ, ಆರ್ಥಿಕ ಇಲಾಖೆಗಳ ಅಭಿಪ್ರಾಯ ಪಡೆದು, ಸಚಿವ ಸಂಪುಟ ಒಪ್ಪಿಗೆಯ ನಂತರದಲ್ಲಿ ಅಧಿಸೂಚನೆ ಹೊರಡಿಸಬೇಕಿರುತ್ತದೆ. ಸದರಿ ಪ್ರಕ್ರಿಯೆಯು ಹಂತ ಹಂತವಾಗಿ ನಡೆಯುತ್ತಿದ್ದು ಶೀಘ್ರ ನಿಯಮಗಳನ್ನು ಘೋಷಿಸಲಾಗುವುದು.

ಸೇಡಂ ಮತಕ್ಷೇತ್ರದಲ್ಲಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆಗಳ ಪ್ರಾರಂಭ

686 (445) ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಮತಕ್ಷೇತ್ರದಲ್ಲಿ ಈ ಕೆಳಗೆ ತೋರಿಸಿದ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆಗಳು ಪ್ರಾರಂಭಿಸುವ ಅವಶ್ಯಕತೆಯಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;